ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	502
ಮಾನ್ಯ ಸದಸ್ಯರ ಹೆಸರು	ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದವರು	ಅಬಕಾರಿ ಸಚಿವರು
ಉತ್ತರಿಸಬೇಕಾದ ದಿನಾಂಕ	24-09-2020

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕಳೆದ 3 ವರ್ಷಗಳಿಂದ ವಿವಿಧ ವರ್ಗಗಳ ಪರವಾನಗಿಯಿಂದ/ಅಬಕಾರಿ ಗುತ್ತಿಗೆದಾರರಿಂದ ಹಾಗೂ ಡಿಸ್ಟಿಲರಿಗಳಿಂದ ಅಬಕಾರಿ ಇಲಾಖೆಗೆ ಬರಬೇಕಾಗಿರುವ ಬಾಕಿ ತೆರಿಗೆ ಹಣವೆಷ್ಟು: (ಡಿಸ್ಟಿಲರಿವಾರು/ ಕಂಪನಿವಾರು/ಇವುಗಳ ಮಾಲೀಕರು/ ಸಂಪೂರ್ಣ ಮಾಹಿತಿ ನೀಡುವುದು)	ಸರ್ಕಾರವು ದಿನಾಂಕ: 01-07-2007 ರಿಂದ ರಾಜ್ಯಾದ್ಯಂತ ಸಾರಾಯಿ ಉತ್ಪಾದನೆ ಮತ್ತು ಮಾರಾಟವನ್ನು ನಿಷೇಧಿಸಿ ಅಬಕಾರಿ ಗುತ್ತಿಗೆ ನೀಡುವುದನ್ನು ರದ್ದುಗೊಳಿಸಲಾಗಿರುವುದರಿಂದ 3 ವರ್ಷಗಳಿಂದ ಅಬಕಾರಿ ಗುತ್ತಿಗೆಯಿಂದ ಬರಬೇಕಾಗಿರುವ ಬಾಕಿ ಯಾವುದೂ ಇರುವುದಿಲ್ಲ. ಡಿಸ್ಟಿಲರಿಗಳಿಂದ ಮದ್ಯ ಪಾನೀಯಗಳನ್ನು ರವಾನೆ ಮಾಡುವ ಪೂರ್ವದಲ್ಲಿಯೇ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕವನ್ನು ಪಾವತಿಸಿಕೊಂಡ ನಂತರವೇ ಕರ್ನಾಟಕ ರಾಜ್ಯ ಪಾನೀಯ ನಿಗಮದ ಡಿಪೋಗಳಿಗೆ ಮದ್ಯದ ಸರಕನ್ನು ಕಳುಹಿಸಲಾಗುತ್ತಿರುವುದರಿಂದ ಅಬಕಾರಿ ಸುಂಕವನ್ನು ಬಾಕಿ ಉಳಿಸಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.
ಆ)	ಈ ಬಾಕಿ ಉಳಿಸಿಕೊಂಡಿರುವ ತೆರಿಗೆ ಹಣವನ್ನು ಇಲ್ಲಿಯವರೆಗೂ ವಸೂಲು ಮಾಡದಿರಲು ಕಾರಣವೇನು: ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ಎಷ್ಟು ವರ್ಷಗಳಿಂದ ಬಾಕಿ ಇಟ್ಟುಕೊಂಡಿದ್ದಾರೆ. (ವಿವರ ನೀಡುವುದು)	ಉದ್ಭವಿಸುವುದಿಲ್ಲ.
ಇ)	ಬಾಕಿ ಉಳಿಸಿಕೊಂಡಿರುವ ತೆರಿಗೆ ಹಣವನ್ನು ಎಷ್ಟು ದಿವಸಗಳಲ್ಲಿ ವಸೂಲು ಮಾಡಲಾಗುವುದು: (ವಿವರ ನೀಡುವುದು)	ಉದ್ಭವಿಸುವುದಿಲ್ಲ.
ಈ)	ಈ ಹಿಂದೆ ಅಬಕಾರಿ ಇಲಾಖೆಯಿಂದ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮುಂದೆ ಪ್ರಕರಣಗಳಿರುವ ಅಂಶವನ್ನು ಅಬಕಾರಿ ಇಲಾಖೆಯ ಆಯುಕ್ತರು ಸ್ಪಷ್ಟಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಅಂತಹ ಪ್ರಕರಣಗಳು ಎಷ್ಟಿವೆ? (ಸಂಪೂರ್ಣ ವಿವರ ನೀಡುವುದು)	ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮುಂದೆ ಪ್ರಕರಣಗಳಿರುವ ಅಂಶವನ್ನು ಅಬಕಾರಿ ಇಲಾಖೆಯ ಆಯುಕ್ತರು ಸ್ಪಷ್ಟಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮುಂದೆ ಬಾಕಿಯಿರುವ ಪ್ರಕರಣಗಳು 1946-47ನೇ ಸಾಲಿನಿಂದ 2004-05ನೇ ಸಾಲಿನ ಸಾರಾಯಿ/ಶೇಂದಿ ಗುತ್ತಿಗೆಗೆ ಸಂಬಂಧಿಸಿದ್ದು, ದಿನಾಂಕ:01-07-2007

		ರಿಂದ ರಾಜ್ಯಾದ್ಯಂತ ಸಾರಾಯಿ ಉತ್ಪಾದನೆ ಮತ್ತು ಮಾರಾಟವನ್ನು ನಿಷೇಧಿಸಲಾಗಿರುತ್ತದೆ. ಆ ನಂತರದಿಂದ ಯಾವುದೇ ಸಾರಾಯಿ/ಶೇಂದಿ ವಹಿವಾಟು ಇಲ್ಲದ ಕಾರಣ ಮುಂದಿನ ವರ್ಷಗಳಲ್ಲಿ ಬಾಕಿ ಮೊತ್ತದ ಪ್ರಶ್ನೆ ಉದ್ಭವವಾಗುವುದಿಲ್ಲ. ಬಾಕಿ ಉಳಿದಿರುವ ಅಸಲಿಗೆ ಸಂಬಂಧಪಟ್ಟಂತೆ ವಾರ್ಷಿಕವಾಗಿ ಅಸಲಿನ ಮೇಲೆ ಶೇ.15ರಷ್ಟು ಬಡ್ಡಿ ವಿಧಿಸುವ ಕ್ರಮ ಹಾಲಿ ಜಾರಿಯಲ್ಲಿರುತ್ತದೆ. ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಶಿಫಾರಸ್ಸಿನಂತೆ ಸರ್ಕಾರವು ಬಾಕಿ ವಸೂಲಾತಿಗಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿದ್ದು ಸಮಿತಿಯ ವರದಿಯನ್ನಾಧರಿಸಿ ಬಾಕಿ ವಸೂಲಾತಿ ಕ್ರಮ ಕೈಗೊಳ್ಳಲಾಗಿರುತ್ತದೆ. ಸರ್ಕಾರವು 2016-17ನೇ ಸಾಲಿನಲ್ಲಿ ಜಾರಿಗೆ ತಂದಿದ್ದ ಕರಸಮಾಧಾನ ಯೋಜನೆ-4 ರಡಿ ರಾಜ್ಯಾದ್ಯಂತ ಒಟ್ಟು ರೂ.41.89 ಕೋಟಿಗಳ ಅಸಲು ಮೊತ್ತ ವಸೂಲಾಗಿದ್ದು, ಅದಕ್ಕೆ ಅನ್ವಯಿಸುವ ಬಡ್ಡಿ ಹಣವನ್ನು ಮನ್ನಾ ಮಾಡಲಾಗುತ್ತಿದೆ. ದಿನಾಂಕ: 31.03.2020 ರ ಅಂತ್ಯಕ್ಕೆ 644 ಪ್ರಕರಣಗಳಲ್ಲಿ ಅಸಲು ರೂ.173.51 ಕೋಟಿ ಮತ್ತು ಬಡ್ಡಿ ರೂ.588.21 ಕೋಟಿ ಸೇರಿ ಒಟ್ಟು ರೂ. 761.73 ಕೋಟಿ ಬಾಕಿ ಇರುತ್ತದೆ.

ಆಇ 78 ಇಎಲ್‌ಕ್ಯೂ 2020

(ಹೆಚ್ ನಾಗೇಶ್)
ಅಬಕಾರಿ ಸಚಿವರು